**ಸಿ.ಸಿ. ನಂ.1867/2025**

**ಪಿ.ಡಬ್ಲ್ಯೂ. -1**

**<u>ದಿನಾಂಕಃ 05/08/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಂದುವರೆದ ಪಾಟೀಸವಾಲುಃ ಆರೋಪಿ ಪರ ಶ್ರೀ .ಡಿ ಆರ್. ವಕೀಲರಿಂದ</u>**

ನನ್ನ ಹೆಂಡತಿ ನನಗೆ ಯಾವುದೇ ಜಿ ಪಿ ಎ ಮತ್ತು ಎಸ್ ಪಿ ಎ ಕೊಟ್ಟಿರುವುದಿಲ್ಲ.

ಪ್ರಶ್ನೆ ಃ ನಿಮ್ಮ ನೋಟೀಸು, ಪಿರ್ಯಾದಿ ಮತ್ತು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಚೆಕ್ ಸಂಖ್ಯೆ 000017 ಮೆಟೀರಿಯಲ್ ಆಲ್ಟರೇಷನ್ ಆಗಿದೆ ಎಂದು ತಿಳಿಸಿದ್ದು ಅದು ಯಾವ ಮೆಟೀರಿಯಲ್ ಅಲ್ಟರೇಷ ಎಂದು ಹೇಳ ಬಹುದೇ ?

ಉತ್ತರಃ ದಿನಾಂಕ ವನ್ನು ಬರೆಯುವಾಗ ತಪ್ಪು ದಿನಾಂಕ ಬರೆದಿರುವ ಕಾರಣ ಅದನ್ನು ನಗದೀಕರಣಕ್ಕೆ ಹಾಜರುಪಡಿಸಿಲ್ಲ.

ಸದರಿ ತಪ್ಪು ದಿನಾಂಕ ಯಾವುದೆಂದು ಹೇಳಬಹುದೇ ಎಂದರೆ ವರ್ಷವನ್ನು ತಪ್ಪು ಬರೆಯಲಾಗಿತ್ತು ಯಾವ ವರ್ಷ ಎಂದು ನನಗೆ ನೆನಪಿಲ್ಲ. ಸದರಿ ತಪ್ಪು ದಿನಾಂಕವನ್ನು ಬರೆದ ಚೆಕ್ಕು ನನ್ನ ಬಳಿ ಇದೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಸದರಿ ಚಕ್ನ ಮೇಲೆ ದಿನಾಂಕ 08.01.2021 ಎಂದ ಬರೆಯಲಾಗಿತ್ತು ಎಂದರೆ ನನಗೆ ನೆನಪಿಲ್ಲ ಆದರೆ 2024 ರ ಸಾಲಿನ ದಿನಾಂಕ ಇರಲಿಲ್ಲ. 08.01.2021 ಕ್ಕೆ ಚೆಕ್ಕನ್ನು ನಗದೀಕರಣಕ್ಕೆ ಹಾಜರುಪಡಿಸಲು ತೊಂದರೆ ಇತ್ತ ಎಂದರೆ ನಾನು ಆರೋಪಿಗೆ ಚೆಕ್ಕನ್ನು ನಗದೀಕರಣಕ್ಕೆ ಹಾಜರುಪಡಿಸುತ್ತೇನೆ ಎಂದು ಹೇಳಿಲ್ಲ ಮತ್ತು ನೋಟೀಸು ನೀಡಿರಲಿಲ್ಲ. 2020 ನೇ ಸಾಲಿನ ಒಳಗಾಗಿ ನನ್ನ ಮತ್ತು ನನ್ನ ಹೆಂಡತಿ ಕಡೆಯಿಂದ ಆರೋಪಿ ಪಡೆದುಕೊಂಡಿದ್ದ ಸಂಪೂರ್ಣ ಹಣವನ್ನು ಆರೋಪಿ ಪಾವತಿ ಮಾಡಿದ್ದರು ಆದ ಕಾರಣ ನಾನು ಚೆಕ್ಕನ್ನು 2021 ರಂದು ನಗದೀಕರಣಕ್ಕೆ ಹಾಜರುಪಡಿಸಿಲ್ಲ ಎಂದರೆ

ಸರಿಯಲ್ಲ. ನನ್ನ ಹೆಂಡತಿಗೆ ಆರೋಪಿಯ ಪರಿಚಯ ಇದೆ. ನನ್ನ ಹೆಂಡತಿ ಆರೋಪಿಯ ಖಾತೆಗೆ ಹಣ ವರ್ಗಾವಣೆ ಮಾಡಿದ್ದಾರೆ ಎಂದರೆ ನಾನು ಹೇಳಿದ ಕಾರಣ ಮಾಡಿರುತ್ತಾರೆ. ದಿನಾಂಕ 18.07.2017 ರಂದು ಆರೋಪಿಯಿಂದ ಬದ್ರತೆಗಾಗಿ ಎಷ್ಟು ಚೆಕ್ಕುಗಳನ್ನು ಪಡೆದುಕೊಳ್ಳಲಾಗಿದೆ ಎಂದು ನನಗೆ ನೆನಪಿಲ್ಲ. ಆರೋಪಿಯಿಂದ ನನ್ನ ಹೆಂಡತಿ ನಾಲ್ಕು ಚೆಕ್ಕುಗಳನ್ನು ನಾನು ನಾಲ್ಕು ಚೆಕ್ಕುಗಳನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ಚೆಕ್ಕುಗಳನ್ನು ನಾನೇ ಪಡೆದುಕೊಂಡಿದ್ದೇನೆ. ಎಂಟು ಚೆಕ್ಕುಗಳನ್ನು ಆರೋಪಿ ನನ್ನ ಕೈಗೆ ನೀಡಿದ್ದಾರೆ ಎಂದು ತೋರಿಸುವ ದಾಖಲೆಗಳು ಇದೆಯಾ ಎಂದರೆ 4 ಚಕ್ಕುಗಳಿಗೆ ಮಾತ್ರ ಕರಾರು ಇರುತ್ತದೆ ಇತರೆ ನಾಲ್ಕು ಚೆಕ್ಕುಗಳಿಗೆ ಇರುವುದಿಲ್ಲ. ಕರಾರು ಮುಖಾಂತರ ಪಡೆದ ಚೆಕ್ಕುಗಳು ಇನೊಂದು ಪ್ರಕರಣಕ್ಕೆ ಸಂಬಂದಿಸಿದ ಚೆಕ್ಕುಗಳು. ಈ ಪ್ರಕರಣದ ಚೆಕ್ಕುಗಳ ಸಂಬಂದ ಯಾವುದೇ ದಾಖಲೆ ಇಲ್ಲ. ಈ ಪ್ರಕರಣದ ಚೆಕ್ಕುಗಳನ್ನು ಆರೋಪಿ ನನ್ನ ಹೆಂಡತಿಯ ಕೈಗೆ ನೀಡಿದ ಕಾರಣ ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಪಡೆದುಕೊಂಡ ಹಣಕ್ಕೆ ನಾನು ಯಾವುದೇ ರಶೀದಿ ನೀಡಿಲ್ಲ ಎಂದರೆ ಸಂಪೂರ್ಣ ಹಣವನ್ನು ಬ್ಯಾಂಕ್ ಖಾತೆ ಮುಖಾಂತರ ಪಡೆದುಕೊಂಡಿದ್ದೇನೆ ಅದರ ವಿವರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಆರೋಪಿ ನಗದು ಮುಖಾಂತರ ಸಹ ಹಣ ಪಾವತಿ ಮಾಡಿದ್ದಾರೆ ಎಂದರೆ ಸರಿ. ನಗದು ಮುಖಾಂತ ಪಡೆದುಕೊಂಡ ಹಣಕ್ಕೆ ನಾನು ರಶೀದಿ ನೀಡಿಲ್ಲ ಎಂದರೆ ಸರಿ. ದಿನಾಂಕ 30.01.2017 ರಂದು ನನ್ನ ಹೆಂಡತಿ ಆರೋಪಿಗೆ ಯಾವುದೇ ಹಣ ಪಾವತಿ ಮಾಡಿಲ್ಲ ಎಂದರೆ ಸರಿ. ದಿನಾಂಕ 29.02.2018 ರಂದು ನನ್ನ ಹೆಂಡತಿ ಆರೋಪಿಗೆ ಯಾವುದೇ ಹಣ ಪಾವತಿ ಮಾಡಿಲ್ಲ

ಎಂದರೆ ನನಗೆ ನೆನಪಿಲ್ಲ. ದಿನಾಂಕ 13.08.2019 ರಂದು ನನ್ನ ಹೆಂಡತಿ ಆರೋಪಿಗೆ ಯಾವುದೇ ಹಣ ಪಾವತಿ ಮಾಡಿಲ್ಲ ಎಂದರೆ ಸರಿ. ನನ್ನ ಹೆಂಡತಿಯ ಖಾತೆಯಿಂದ ಆರೋಪಿ ಖಾತೆಗೆ 15 ಲಕ್ಷದ 40 ಸಾವಿರ ರೂಗಳು ಮಾತ್ರ ಪಾವತಿ ಆಗಿದೆ ಎಂದರೆ ಸರಿಯಲ್ಲ 20 ಲಕ್ಷದ 40 ಸಾವಿರ ರೂಪಾಯಿಗಳು ಪಾವತಿ ಆಗಿರುತ್ತದೆ. 20 ಲಕ್ಷದ 40 ಸಾವಿರ ರೂಪಾಯಿಗಳು ನನ್ನ ಹೆಂಡತಿ ಖಾತೆಯಿಂದ ಆರೋಪಿ ಖಾತೆಗೆ ವರ್ಗಾವಣೆ ಆಗಿರುವ ಬಗ್ಗೆ ಹಾಜರು ಪಡಿಸಿದ್ದೇನೆ.

ಆರೋಪಿ ಕಡೆಯಿಂದ ಬ್ಯಾಂಕ್ ಖಾತೆ ವರ್ಗಾವಣೆ ಮುಖಾಂತರ ಮತ್ತು ನಗದು ಮುಖಾಂತರ ಪಡೆದುಕೊಂಡ ಹಣದ ಬಗ್ಗೆ ನೋಟೀಸಿನಲ್ಲಿ, ಪಿರ್ಯಾದಿಯಲ್ಲಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ತಿಳಿಸಿಲ್ಲ ಎಂದರೆ ನಾನು ಆಗಸ್ಟ್ 2020 ರಿಂದ ಬಾಕಿ ಬರಬೇಕಾಗಿದ್ದ ಅಸಲು ಮೊತ್ತಕ್ಕೆ ಪ್ರಕರಣ ದಾಖಲಿಸಿದ್ದೇವೆ. ಆಗಸ್ಟ್ 2020 ಕ್ಕೆ ಪೂರ್ವದಲ್ಲಿ ನಮ್ಮಿಂದ ಆರೋಪಿ ಪಡೆದುಕೊಂಡಿದ್ದ ಹಣವನ್ನು ಸಂಪೂರ್ಣ ಪಾವತಿ ಮಾಡಿದ್ದಾರೆಯೇ ಎಂದರೆ ಪಾವತಿ ಮಾಡಿರುವುದಿಲ್ಲ. ಈ ಪ್ರಕರಣವನ್ನು ಆಗಸ್ಟ್ 2020 ರ ನಂತರ ಬಾಕಿ ಬರಬೇಕಾಗಿರುವ ಅಸಲು ಮತ್ತು ಬಡ್ಡಿ ಹಣಕ್ಕೆ ಸಂಬಂದಿಸಿದಂತೆ ದಾಖಲಿಸಲಾಗಿರುತ್ತದೆ.

ದಿನಾಂಕ 02.04.2020 ರಂದು ಆರೋಪಿ ಬಾಕಿ 95 ಸಾವಿರ ರೂಪಾಯಿಗಳನ್ನು ನನ್ನ ಹೆಂಡತಿ ಖಾತೆಗೆ ಜಮಾ ಮಾಡಿದ್ದಾರೆ ಎಂದರೆ ಸರಿಯಲ್ಲ ನನ್ನ ಖಾತೆಗೆ ಜಮಾ ಮಾಡಿದ್ದಾರೆ ಆದರೆ ಅದು ಬಡ್ಡಿ ಪಾವತಿಗಾಗಿ ಮಾಡಲಾದ ಹಣ. ದಿನಾಂಕ 20.07.2020 ರಂದು ಆರೋಪಿ ನನ್ನ ಹೆಂಡತಿ ಖಾತೆಗೆ 84 ಸಾವಿರ ರೂಪಾಯಿಗಳನ್ನು ಉಳಿದ ಬಾಕಿ ಪಾವತಿಗಾಗಿ ಜಮಾಡಿದ್ದಾರೆ ಎಂದರೆ ಅದು ಬಡ್ಡಿ

ಪಾವತಿಗಾಗಿ ನೀಡಿದ ಹಣ. ಆರೋಪಿಯಿಂದ ಬಾಕಿ ಬರಬೇಕಾದ ಸಂಪೂರ್ಣ ಹಣವನ್ನು ಪಡೆದುಕೊಂಡ ನಂತರ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಂಡತಿ ಕಡೆಯಿಂದ ನೋಟೀಸು ಜಾರಿ ಮಾಡಿಸಿ ಪ್ರಕರಣ ದಾಖಲಿಸಿದರೆ ನಿಜಾಂಶ ತಿಳಿಯುತ್ತದೆ ಎಂಬ ಕಾರಣಕ್ಕೆ ನಾನು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಹೆಂಡತಿ ಪ್ರತಿ ವರ್ಷ ಆದಾಯ ತೆರಿಗೆ ಪಾವತಿ ಮಾಡುತ್ತೇವೆ. ಆರೋಪಿಗೆ ನೀಡಲಾಗಿದೆ ಎಂದು ಹೇಳುವ ಹಣದ ವಿವರಗಳನ್ನು ಆದಾಯ ತೆರಿಗೆ ಪಾವತಿ ಮಾಡುವ ಕಾಲಕ್ಕೆ ನನ್ನ ಹೆಂಡತಿ ಮತ್ತು ನನ್ನ ಬ್ಯಾಲೆನ್ಸ್ ಶೀಟ್ ನಲ್ಲಿ ತೋರಿಸಲಾಗಿದೆ. ಆರೋಪಿಯಿಂದ ಶೇಕಡಾ 36 ರ ರಷ್ಟು ಬಡ್ಡಿ ರೂಪದಲ್ಲಿ ಪಡೆದುಕೊಳ್ಳಲಾಗಿದೆ ಎಂಬ ಹಣದ ಬಗ್ಗೆ ಸಹ ಆದಾಯ ತೆರಿಗೆ ಪಾವತಿ ಸಲ್ಲಿಸುವ ಕಾಲಕ್ಕೆ ತೋರಿಸಲಾಗಿದೆ. 2017 ರಿಂದ 2020 ರ ವರೆಗಿನ ಆದಾಯ ತೆರಿಗೆ ಪಾವತಿ ಸಲ್ಲಿಸಿದ ವಿವರಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ. ನಿಪಿ 7 ರ ಪುಟ ಸಂಖ್ಯೆ 3 ರಲ್ಲಿ ಉಲ್ಲೇಖಸಿದ ಕೊಷ್ಟಕದಲ್ಲಿ 25 ಲಕ್ಷ ರೂಪಾಯಿ ಅಸಲು ಮತ್ತು 36 ಲಕ್ಷ ರೂಪಾಯಿ ಬಡ್ಡಿ ತೋರಿಸಲಾಗಿದೆ ಎಂದರೆ ಸರಿ. ನಿಪಿ 7 ರ ಪುಟ ಸಂಖ್ಯೆ 5 ರ ಮೊದಲ ಸಾಲುಗಳಲ್ಲಿ 61 ಲಕ್ಷ ರೂಪಾಯಿ ಬಾಕಿ ಎಂದು ಬೇಡಿಕೆ ಇಟ್ಟಿದ್ದೇನೆ ಎಂದರೆ ಸರಿ. ನಿಪಿ 7 ರ ಪುಟ ಸಂಖ್ಯೆ 5 ಕಂಡಿಕೆ 4 ರಲ್ಲಿ 46 ಲಕ್ಷ ರೂಪಾಯಿಗಳು ಬಾಕಿ ಎಂದು ಬೇಡಿಕೆ ಇಟ್ಟಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮಾನವಿಯತೆಯ ಆದಾರದ ಮೇಲೆ 46 ಲಕ್ಷ ರೂಪಾಯಿಗಳಿಗೆ ತೀರ್ಮಾ ಮಾಡಿಕೊಳ್ಳುವ ಉದ್ದೇಶದಿಂದ ತಿಳಿಸಲಾಗಿದೆ. ನಾನು ಆರೋಪಿಗೆ 15 ಲಕ್ಷ ರೂಪಾಯಿಗಳನ್ನು ನೀಡಬೇಕೆಂದು ನೋಟೀಸು ನೀಡಿಲ್ಲ. ಸಾಕ್ಷಿ ಮುಂದುವರೆದು 3

**ಪಿ.ಡಬ್ಲ್ಯೂ. -1**

ಚೆಕ್ಕುಗಳು ನಗದಾಗದೆ ಇದ್ದ ಕಾರಣ 3 ಚೆಕ್ಕುಗಳ ಹಣ ನೀಡಬೇಕೆಂದು ನೋಟೀಸು ನೀಡಿದ್ದೇನೆ. ನಿಪಿ 7 ರಲ್ಲಿ 15 ಲಕ್ಷ ರೂಪಾಯಿಗಳು ಮತ್ತು ಶೇಕಡಾ 12 ರಷ್ಟು ವಾರ್ಷಕ ಬಡ್ಡಿ ನೀಡಬೇಕೆಂದು ತಿಳಿಸಲಾಗಿದೆ ಎಂದರೆ ಸರಿ. ನಿಪಿ 1 ರಿಂದ 3 ಚೆಕ್ಕುಗಳ ಮತ್ತು ನನ್ನ ಬಳಿ ಇರುವ 000017 ರ ಚೆಕ್ ನ ಮೇಲೆ ದಿನಾಂಕ 08.01.2021 ಬರೆಯಲಾಗಿತ್ತು ಎಂದರೆ ಸರಿಯಲ್ಲ ನಾಲ್ಕೂ ಚೆಕ್ಕುಗಳ ಮೇಲೆ ಹಣದ ಮೊತ್ತ, ಪೇಯಿ ಹೆಸರು ಮತ್ತು ಸಹಿಯನ್ನು ಆರೋಪಿ ಬರೆದಿದ್ದಾರೆ ದಿನಾಂಕ ವನ್ನು ನಾನು ಬರೆದಿದ್ದೇನೆ. ದಿನಾಂಕ 08.01.2021 ಎಂದು ಇದ್ದ ದಿನಾಂಕ ವನ್ನು ಚೆಕ್ಕುಗಳ ಮೇಲೆ 08.07.2024 ಎಂದು ತಿದ್ದಿ ನಗದೀಕರಣಕ್ಕೆ ಹಾಜರುಪಡಿಸಲಾಗಿದೆ ಎಂದರೆ ಸರಿಯಲ್ಲ. ನಾಲ್ಕೂ ಚೆಕ್ಕುಗಳ ಮೇಲೆ ಒಂದೇ ದಿನ ದಿನಾಂಕವನ್ನು ಬರೆದಿರುತ್ತೇನೆ ಸಾಕ್ಷಿ ಮುಂದುವರೆದು ನೋಟೀಸನ್ನು ಕಳುಹಿಸಿದ ನಂತರ ಬರೆದಿರುತ್ತೇನೆ.

**ಮರುವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿದೆ.)

**(ಓ.ಹೇ.ಕೇ.ಸ.)**

**(ಶ್ರೀ ಕೃಷ್ಣ.ಜೆ )**

**51ನೇ ಅ.ಮು.ಮ.ದಂ., ಬೆಂಗಳೂರು ನಗರ.**